ಕಲ್ಪನೆ ಕಾವ್ಯ

## ಸಂಜೆ ಐದೂಮುಕ್ಕಾಲು

'ಕಚೇರಿಯಿಂದ ನೇರ ಅಲ್ಲಿಗೇ ಬರುವೆ'
ಎಂದು ನಾನು ಹೇಳಿದ್ದೆ ನಿನಗೂ
ಅಲ್ಲಿಗೇ ಬರಲು.
ಲೋಕಲ್‌ನಿಂದಿಳಿದು
ಹೇಳಿದ ಸಮಯಕ್ಕೆ ಸರಿಯಾಗಿ
ಇನ್ನ್ಯಾವುದೋ ಕೆಲಸ
ಎಡತಾಕಿಸಿಕೊಂಡವನ
ಪಡಿಪಾಟಲು
ನಿನಗರ್ಥವಾಗದ್ದೇನಲ್ಲ.

ಇಂದಾದರೂ ಮುಕ್ತನಾಗಬೇಕೆಂದಿದ್ದೆ
ಹಳೆಯ ಆರೋಪಗಳಿಂದ
ತಲುಪಿ ನಿನಗಿಂತ ಮುಂಚೆ...
ದಾರಿ ಕಾಯುವ ಆ ಕಂಗಳಲ್ಲಿ ಕಾಣುವ
ಸಂತಸದಚ್ಚರಿಯಲಿ ಮೀಯಲು!

ಈ ಸಲವೂ ತಪ್ಪಿದ
ಲೆಕ್ಕಾಚಾರಕ್ಕೆ ಪಕ್ಕಾಗಿ
ತಡವಾಗಿ ಹೊರಟು
ಇನ್ನಷ್ಟು ತಡವಾಗಿದೆ.
ನಿನ್ನ ಕ್ಷಮೆಯಾಚಿಸುವುದೆಷ್ಟು ಸಲೀಸು?
ಸುಳ್ಳು ಹೆದರಿಕೆಗೆ
ಸುಮ್ಮನೆ ಧೈರ್ಯ ನಟಿಸಿ
ತಲುಪುತ್ತೇನೆ, ತಿರುತಿರುಗಿ ಅಲ್ಲಿಗೇ.
ನಾನೇ ಸೂಚಿಸಿದಲ್ಲಿಗೆ!

ಕಾಯಲೊಲ್ಲದ ಕಾಲ
ಸಮಯಕ್ಕೆ ಸರಿಯಾಗಿ ಬಂದು
ಹೋಗಿದ್ದಾನೆ...
ಅದಾಗಲೇ ಕೆಲವರನು ತೆಕ್ಕೆಹಾಕಿಕೊಂಡು
ಉಳಿಸಿ ಸಾಕ್ಷಿಗೊಂದಷ್ಟು ಅವಶೇಷ!
ಐದೂಮುಕ್ಕಾಲಿಗೇ ಉಸಿರು ನಿಂತ
ಒಂದು ಅಲಾರಂ ಗಡಿಯಾರ!!



ಸಿಟ್ಟಿಳಿದಿದೆ... ಅದೇತಾನೆ ಆಕೆ
ಸ್ವಿಚ್‌ಆನ್ ಮಾಡಿರುವ ಮೊಬೈಲು
ಕಾಯುತ್ತಿದೆ, ಕರೆಗೆ.
ನಗರದ ಯಾವುದೋ
ಅಪಾರ್ಟ್‌ಮೆಂಟಿನಲ್ಲಿ
ಇದ್ಯಾವುದರ ಅರಿವಿಲ್ಲದೆ.

**ರಾಮಚಂದ್ರ ಪೈ**

## ಕಾಲ ಕಾಯುವುದಿಲ್ಲ

ಒಡೆದ ಗಾಜುಗಳ ಮಧ್ಯೆ
ನಿಂತುಹೋದ ಗಡಿಯಾರದ
ನೆನಪಿನ ಮುಳ್ಳು ಹಿಂದೆ ಸರಿದು
ಕಾಲಗತಿಯ ಕೆದಕಿತ್ತು...

ಆಗಿನ್ನೂ ಹೊಸತು ಶೆಲ್ಲು
ಮೊನಚು ಮುಳ್ಳಿಗೆ ಧಾವಂತ
ಚುಮು ಚುಮು ಚಳಿಯಲ್ಲಿ
ನಿತ್ಯ ಸುಪ್ರಭಾತದ ಗಾನ

ಕೈಗಳು ತಡಕಿ ತಲೆಗೆ ಮೊಟಕಿದರೂ
ಒಂದೇ ರಾಗ... ಟಿಕ್ ಟಿಕ್ ವೇಗ
ಅದೆಷ್ಟು ವಸಂತಗಳ ನಡಿಗೆ
ಈಗೀಗ ಸೋಲುತ್ತಿವೆ ಹೆಜ್ಜೆ

ದಾಟಿ ಮುನ್ನಡೆದಿವೆ ಹೊಸ ಹೊಸ ಮುಖ
ನಿಂತುಹೋದ ಎದೆಯ ಬಡಿತ
ನೂರಾರು ಗಾಜುಗಳಲಿ ಮಾಸಿದ
ಚಹರೆಯ ಗುರುತು

ಕಂದಿ ಕಪ್ಪಾಗಿ ನಿಂತರೂ
ಕಾಲ ಕಾಯುವುದಿಲ್ಲ
ಓಡಬೇಕು ಕಾಲಚಕ್ರದ ಜೊತೆಗೆ
ಪ್ರತಿ ಚಣವೂ...

**ಗಾಯತ್ರೀ ರಾಘವೇಂದ್ರ**